**ಸರ್ಕಾರಿಆದೇಶ ಸಂಖ್ಯೆಡಿಪಿಎಆರ್ 182 ಎಸ್ಆರ್ಆರ್ 2011,**
**ಬೆಂಗಳೂರು, ದಿನಾಂಕ 06-05-2017**

16. ಪ್ರಸ್ತುತ ಅಸ್ತಿತ್ವದಲ್ಲಿರುವ ಮುಂಬಡ್ತಿ ಮೀಸಲಾತಿ ನೀತಿಯಅನುಸಾರನೀಡಲಾಗಿರುವಎಲ್ಲಾ ವೃಂದಗಳಜೇಷ್ಠತೆ ಪಟ್ಟಿಗಳನ್ನು ಮತ್ತುಅಂತಹಎಲ್ಲಾ ಮೇಲ್ಪಟ್ಟದ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕನ ಮಾಡತಕ್ಕದ್ದು; ಮತ್ತು ಪ್ರತಿ ವೃಂದಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ಕ್ರಮ ತೆಗೆದುಕೊಳ್ಳುವುದು:-

1) ಪುನರಾವಲೋಕನವನ್ನು ದಿನಾಂಕ 27-04-1978 ರಿಂದ ತೆಗೆದುಕೊಳ್ಳುವುದು ಮತ್ತುದಿನಾಂಕ 27-04-1978 ರಂದುಇದ್ದಂತೆಅಥವಾತದನಂತರದಲ್ಲಿ ನೀಡಲಾಗಿರುವ ಮುಂಬಡ್ತಿಗಳು ಹಾಗೂ ಎಲ್ಲಾ ವೃಂದಗಳಿಗೆ ಪ್ರಕಟಿಸಿರುವ ಜೇಷ್ಠತಾ ಪಟ್ಟಿಗಳು ಅಂತಹ ಪುನರಾವಲೋಕನಕ್ಕೆ ಒಳಪಟ್ಟಿರುತ್ತವೆ.

2) ಸರ್ಕಾರಿಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 1977 ದಿನಾಂಕ 27-04-1978 ಮತ್ತುಅಧಿಕೃತಜ್ಞಾಪನಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 1977 ದಿನಾಂಕ 01-06-1978 ಹಾಗೂThe Karnataka Determination of Seniority of the Government Servants promoted on the basis of reservation (to the posts in the Civil Services of the State) Act, 2002ಇವುಗಳಲ್ಲಿ ಒಳಗೊಂಡಿರುವ ಮುಂಬಡ್ತಿ ಮೀಸಲಾತಿ ನೀತಿಯ ಪರಿಣಾಮವಾಗಿ, ಮೀಸಲಾತಿವೃಂದದಒಬ್ಬಕಿರಿಯ ನೌಕರ[Junior Reserved Category Employee -ಸಂಕ್ಷಿಪ್ತವಾಗಿJRCE] ಸಾಮಾನ್ಯ ವೃಂದದಒಬ್ಬ ಹಿರಿಯ ನೌಕರ [Senior General Category Employee - ಸಂಕ್ಷಿಪ್ತವಾಗಿSGCE]ಗಿಂತ ಮುಂಚಿತವಾಗಿಮುಂಬಡ್ತಿ ಪಡೆದಿರಬಹುದು. JRCEನೌಕರಮುಂಚೆಯೇ ಮುಂಬಡ್ತಿ ಪಡೆದುತತ್ಪರಿಣಾಮವಾದಮುಂಬಡ್ತಿಗಳನ್ನು ಸೇವಾನಿರತರಿಗೆ ನೀಡಲಾಗಿದ್ದರೂ ಸಹ, SGCE [ಕೆಳಹಂತದ ವೃಂದದಲ್ಲಿ] ಮುಂಬಡ್ತಿ ಪಡೆದಾಗ, ಮುಂಬಡ್ತಿ ಪಡೆದ ವೃಂದದಲ್ಲಿಆತನಜೇಷ್ಠತೆಯನ್ನು ಪುನರ್‌ಸ್ಥಾಪಿಸತಕ್ಕದ್ದು ಮತ್ತುJRCEಗಿಂತ ಮೇಲೆ ಇಡತಕ್ಕದ್ದು ಹಾಗೂತತ್ಪರಿಣಾಮವಾಗಿ ನೀಡಲಾದಜೇಷ್ಠತಾ ಪ್ರಯೋಜನವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ನಿರ್ದೇಶಿಸಿರುವಂತೆ ತಾತ್ಕಲಿಕ [Ad hoc] ಎಂದು ಪರಿಗಣಿಸತಕ್ಕದ್ದು. ಅಂತಹ ಪ್ರಕರಣದಲ್ಲಿ, JRCE ಗೆ ನಿಗದಿಪಡಿಸಲಾಗಿದ್ದ ಮುಂಬಡ್ತಿ ದಿನಾಂಕವನ್ನುSGCEಗೆಅರ್ಹತಾ ದಿನಾಂಕವನ್ನಾಗಿthe Karnataka State Civil Services (Regulation of Promotion, Pay and Pension) Act, 1973 ರ ಕಲಂ 6 ಮತ್ತು 9 ಅನ್ನುಓದಿಕೊಂಡಂತೆ ಕಲಂ 4 ರಅನುಸಾರ ನಿಗದಿಪಡಿಬೇಕು.

3) ಆ ರೀತಿಜೇಷ್ಠತೆ ಪುನರ್‌ಸ್ಥಾಪನೆ ಮಾಡಿ, JRCE ಮುಂಬಡ್ತಿಯನ್ನು ಪಡೆದ ದಿನಾಂಕದಿಂದಜಾರಿಗೆ ಬರುವಂತೆSGCEನೌಕರನು ಮುಂಬಡ್ತಿ ಪಡೆದಿರುವನೆಂದುಪರಿಭಾವಿಸಿತಕ್ಕದ್ದು[deemed date of promotion]ಹಾಗೂ

SGCEನೌಕರನಜೇಷ್ಠತೆಯು ಸದರಿಪರಿಭಾವಿಸಲಾದ ದಿನಾಂಕದಿಂದ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

4) ಈ ರೀತಿಯಅಭ್ಯಾಸವನ್ನು[exercise] ಪ್ರತಿಯೊಂದು ವೃಂದದಲ್ಲಿ ಪಾಲಿಸತಕ್ಕದ್ದು. SGCE ನೌಕರನು ಮೇಲಿನ ವೃಂದಕ್ಕೆತಲುಪುವ ವೇಳೆಗೆ ಈಗಾಗಲೇJRCE ನೌಕರನುಇನ್ನೂ ಮೇಲಿನ ವೃಂದಕ್ಕೆ ಮುಂಬಡ್ತಿ ಪಡೆದಿದ್ದಲ್ಲಿ, ಅಂತಹJRCE ನೌಕರನಆ ವೃಂದದಜೇಷ್ಠತೆಯನ್ನು ವ್ಯತ್ಯಾಸ ಮಾಡತಕ್ಕದಲ್ಲ. ಆದಾಗ್ಯೂ, SGCEನೌಕರನು ಸಹ ಮೇಲಿನ ವೃಂದಕ್ಕೆ ಮುಂಬಡ್ತಿ ಪಡೆದಾಗ ಮೇಲೆ ವಿವರಿಸಿದಂತೆ ಅಭ್ಯಾಸವನ್ನು ಪುನರಾವರ್ತನೆ ಮಾಡತಕ್ಕದ್ದು.

5) ಜೇಷ್ಠತೆಯನ್ನು ಪುನರಾವಲೋಕನ ಮಾಡಿದ ಪರಿಣಾಮವಾಗಿ, ಮುಂಬಡ್ತಿ ಪಡೆದಿರುವನೆಂದುಪರಿಭಾವಿಸಲಾದ ದಿನಾಂಕವನ್ನು ನಿಗದಿಪಡಿಸುವಾಗ ಆ ದಿನಾಂಕದಂದು ಮುಂಬಡ್ತಿ ಹೊಂದಲುಅರ್ಹನಿರುವ ಬಗ್ಗೆ ಸಾಮಾನ್ಯವಾಗಿ ಮುಂಬಡ್ತಿ ನೀಡುವ ಸಮಯದಲ್ಲಿ ಪರಿಶೀಲನೆ ಮಾಡುವಅಂಶಗಳನ್ನು ವಿಶ್ಲೇಷಿಸತಕ್ಕದ್ದು.

6) ಪುನರಾವಲೋಕನ ಮಾಡಿದ ಪರಿಣಾಮವಾಗಿ ಸೇವೆಯಲ್ಲಿರುವ ನೌಕರರಿಗೆ ಸಂಬಂಧಿಸಿದಂತೆ, ಯಾವುದೇJRCE ನೌಕರನು ಪುನರಾವಲೋಕನೆ ಮಾಡುತ್ತಿರುವ ವೃಂದದಲ್ಲಿ ಪರಿಭಾವಿತಅರ್ಹತಾ ದಿನಾಂಕವನ್ನು ಪಡೆಯದಿದ್ದಲ್ಲಿ, ಅಂತಹವನುತತ್ಪೂರಿತಜೇಷ್ಠತೆಆಧಾರದ[consequential seniority] ಮೇಲೆ ದಿನಾಂಕ 01-03-1996ಕ್ಕೂ ಪೂರ್ವದಲ್ಲಿ ಮುಂಬಡ್ತಿಯನ್ನು ಪಡೆದಿದ್ದರೆ, ಅವನನ್ನು ಹಿಂಬಡ್ತಿಗೊಳಿಸತಕ್ಕದಲ್ಲ. ದಿನಾಂಕ 01-03-1996ರ ನಂತರದಲ್ಲಿ ಪಡೆದಿರಬಹುದಾದತತ್ಪೂರಿತಜೇಷ್ಠತೆ ಪ್ರಯೋಜನವುಪುನರಾವಲೋಕನೆಗೆ ಷರತ್ತಿಗೆ ಒಳಪಟ್ಟಿರತಕ್ಕದ್ದು. JRCE ನೌಕರನುಅಂತಿಮವಾಗಿಯಾವ ಹುದ್ದೆಗೆಜೋಡಿಸಲ್ಪಡುತ್ತಾನೆ[post fitted against]ಎಂಬುದುಆತನು ಪ್ರಸ್ತುತಕಾರ್ಯನಿರ್ವಹಿಸುತ್ತಿರುವ ವೃಂದ ಸೇರಿದಂತೆಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕನ ಮಾಡಿ ಪೂರ್ಣಗೊಳಿಸಿದ ನಂತರತೀರ್ಮಾನಿಸಲಾಗುವುದು.

7) ಪುನರಾವಲೋಕನ ಮಾಡಿದ ಪರಿಣಾಮವಾಗಿನಿವೃತ್ತಿ ಹೊಂದಿದ ನೌಕರರಿಗೆ ಸಂಬಂಧಿಸಿದಂತೆ,ಅವರು ವಾಸ್ತವವಾಗಿ ಮುಂಬಡ್ತಿ ಪಡೆದ ದಿನಾಂಕಕ್ಕಿಂತ ಮುಂಚಿನಅರ್ಹತಾ ದಿನಾಂಕವನ್ನು ಪಡೆದಲ್ಲಿ, ಆ ದಿನಾಂಕದಿಂದಅವರು ಮುಂಬಡ್ತಿ ಪಡೆದಿರುವರೆಂದು ಪರಿಭಾವಿಸತಕ್ಕದ್ದು.

8) JRCE ನೌಕರನು ನಿಗದಿಪಡಿಸಿರುವ ಸೇವಾ ಅರ್ಹತೆಯನ್ನು ಹೊಂದಿದ್ದುನಿಗದಿಪಡಿಸಲಾಗಿರುವಪರಿಭಾವಿತಅರ್ಹತಾ ದಿನಾಂಕದಆಧಾರದ ಮೇಲೆ ಹಾಗೂ ಇನ್ನಿತರೆಎಲ್ಲಾರೀತಿಯಲ್ಲೂಅರ್ಹನಾಗಿದ್ದಲ್ಲಿ,ಮುಂಬಡ್ತಿಯಲ್ಲಿ ಮೀಸಲಾತಿಅನ್ವಯವಾಗುವ ಮುಂದಿನ ಮೇಲಿನ ವೃಂದಕ್ಕೆ ಮುಂಬಡ್ತಿಗೆ ಪರಿಗಣಿಸಬಹುದು.

9) ಒಂದು ವೃಂದಕ್ಕೆಮುಂಬಡ್ತಿಗಳನ್ನುಎರಡುಅಥವಾ ಹೆಚ್ಚಿನ ಕೆಳ ಹಂತದ ವೃಂದಗಳಿಂದ ಮಾಡುವಾಗ, ಪರಿಭಾವಿತಅರ್ಹತಾ ದಿನಾಂಕಗಳನ್ನು ನಿಗದಿಪಡಿಸಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕಲ್ಪಿಸಿರುವ ಕೋಟಾದಆಧಾರದ ಮೇಲೆ ನಿರ್ಧರಿಸತಕ್ಕದಾಗಿದೆ.

10) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನೌಕರರಿಗೆ ಮುಂಬಡ್ತಿಗಳನ್ನು ಬ್ಯಾಕ್‌ಲಾಗ್‌ಎದುರು ಸರ್ಕಾರಿಆದೇಶ ಸಂಖ್ಯೆಡಿಪಿಎಆರ್ 10 ಎಸ್‌ಬಿಸಿ 97 ದಿನಾಂಕ 24-06-1997ರಲ್ಲಿ ಮತ್ತು ಈ ಕುರಿತು ಕಾಲಕಾಲಕ್ಕೆ ನೀಡಲಾದ ಸೂಚನೆಗಳನ್ವಯ ನೀಡಿರುವುದು ಸಹ ಮೇಲೆ ತಿಳಿಸಿದಂತೆ ಜೇಷ್ಠತೆ ಪಟ್ಟಿಗಳನ್ನು ಪುನರಾಪಲೋಕನೆ ಮಾಡುವ ಮತ್ತುಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವುದಕ್ಕೆ ಒಳಪಟ್ಟಿದೆ.

11) ಮೇಲೆ ತಿಳಿಸಿದಂತೆ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕನೆ ಮಾಡುವಾಗ, ನೇರ ನೇಮಕಾತಿ ಮೂಲಕ ನೇಮಕ ಹೊಂದಿದವರಅರ್ಹತಾ ದಿನಾಂಕವನ್ನುತೀರ್ಮಾನಿಸುವ ಪ್ರಶ್ನೆಉದ್ಭವವಾಗುವುದಿಲ್ಲ ಏಕೆಂದರೆಅವರಜೇಷ್ಠತೆಯನ್ನುಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 5 ಮತ್ತುಅಧಿಕೃತಜ್ಞಾಪನ ಸಂಖ್ಯೆಡಿಪಿಎಆರ್ 48 ಎಸ್‌ಎಸ್‌ಆರ್ 75 ದಿನಾಂಕ 05-07-1976ರಲ್ಲಿ ನೀಡಿರುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ನಿಗದಿಪಡಿಸಬೇಕಾಗುತ್ತದೆ.

*****